ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್, ಕೋಲಾರ.

ಇ-ಮೇಲ್ ceozpkol@gmail.com ದೂರವಾಣಿ ಸಂಖ್ಯೆ:08152-240649

ಸಂ:ಜಿಪಂಕೋ:ಸಿಡಿಪಿ(5):ಸಿಆರ್.14/2022-23 ದಿನಾಂಕ:08.08.2022

## "ಅಧಿಸೂಚನೆ"

ವಿಷಯ: ಕೋಲಾರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಬಗ್ಗೆ ಅಧಿಸೂಚನೆ ಪ್ರಕಟಿಸುತ್ತಿರುವ ಕುರಿತು.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ:886/ಗ್ರಾಪಂಕಾ/2016 ದಿನಾಂಕ:29.09.2020.

2) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಧಿತ ನಮೂನೆಯಲ್ಲಿ ದೃಢೀಕರಿಸಿ ನೀಡಿರುವ ಮಾಹಿತಿಯಂತೆ.

3) ಈ ಕಛೇರಿಯ ಕರಡು ಅಧಿಸೂಚನೆ ಸಮ ಸಂಖ್ಯೆ ದಿನಾಂಕ:08.06.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಗ್ರಾಮ ಪಂಚಾಯಿತಿ ನೇಮಕಾತಿ ಸೇವಾ ನಿಯಮಗಳನ್ವಯ ನೇರ ನೇಮಕಾತಿ ಮಾಡುವ ಸಲುವಾಗಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಅದರಂತೆ ಕೋಲಾರ ಜಿಲ್ಲೆ ವ್ಯಾಪ್ತಿಯ 06 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳ ಆಧಾರದ ಮೇರೆಗೆ ಹಾಗೂ ಮೀಸಲಾತಿ ಅನ್ವಯ ನೇರ ನೇಮಕಾತಿ ಪ್ರಕ್ರಿಯೆ ಜರುಗಿಸಲು **ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಡಾಟಾ ಎಂಟ್ರಿ ಆಪರೇಟರ್ ಮತ್ತು ಅಟೆಂಡೆಂಟ್** ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ಅಧಿಸೂಚನೆ ಪತ್ರವನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸದರಿ ಅಧಿಸೂಚನೆಯನ್ನು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕಛೇರಿ ನಾಮಫಲಕಗಳಲ್ಲಿ ಪ್ರಕಟಿಸಲು ಸೂಚಿಸಿದೆ. ಹೀಗೆ ಪ್ರಕಟಣೆಗೊಂಡ ನಂತರ ನಿಗಧಿತ ಅವಧಿಯಲ್ಲಿ ಗ್ರಾಮ ಪಂಚಾಯಿತಿಗೆ ಸ್ವೀಕೃತವಾಗುವ ಅರ್ಜಿಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪರಿಶೀಲಿಸಿ ಪಟ್ಟಿ ತಯಾರಿಸಿ ದಾಖಲೆಗಳೊಂದಿಗೆ ನಿಗಧಿತ ಅವಧಿಯಲ್ಲಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್ ಕೋಲಾರ.

ಪ್ರತಿಯನ್ನು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಮಟ್ಟದ ಎಲ್ಲಾ ಕಛೇರಿಗಳ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಸೂಚಿಸಿದೆ.
4. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕೋಲಾರರವರ ಮಾಹಿತಿಗಾಗಿ.

5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ, ಮಾಲೂರು, ಬಂಗಾರಪೇಟೆ, ಕೆ.ಜಿ.ಎಫ್, ಮುಳಬಾಗಿಲು, ಶ್ರೀನಿವಾಸಪುರರವರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯ ಹಾಗೂ ತಮ್ಮ ತಾಲ್ಲೂಕಿನ ಎಲ್ಲಾ ತಾಲ್ಲೂಕುಮಟ್ಟದ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಸೂಚಿಸಿದೆ.
6. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ) ಮಾಹಿತಿಗಾಗಿ ಹಾಗೂ ನಿಮ್ಮ ಕಛೇರಿಯ ಹಾಗೂ ನಿಮ್ಮ ಗ್ರಾಮ ಪಂಚಾಯಿತಿ ಮಟ್ಟದ ಎಲ್ಲಾ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಸೂಚಿಸಿದೆ.
7. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್, ಕೋಲಾರ.

ಇ-ಮೇಲ್ ceozpkol@gmail.com ದೂರವಾಣಿ ಸಂಖ್ಯೆ:08152-240649

ಸಂ:ಜಿಪಂಕೋ:ಸಿಡಿಪಿ(5):ಸಿಆರ್.14/2022-23 ದಿನಾಂಕ:08.08.2022

## "ಅಧಿಸೂಚನೆ"

ವಿಷಯ: ಕೋಲಾರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ:886/ಗ್ರಾಪಂಕಾ/2016 ದಿನಾಂಕ:29.09.2020.

2) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಧಿತ ನಮೂನೆಯಲ್ಲಿ ದೃಢೀಕರಿಸಿ ನೀಡಿರುವ ಮಾಹಿತಿಯಂತೆ.

3) ಈ ಕಛೇರಿಯ ಕರಡು ಅಧಿಸೂಚನೆ ಸಮ ಸಂಖ್ಯೆ ದಿನಾಂಕ:08.06.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಗ್ರಾಮ ಪಂಚಾಯಿತಿ ನೇಮಕಾತಿ ಸೇವಾ ನಿಯಮಗಳನ್ವಯ ನೇರ ನೇಮಕಾತಿ ಮಾಡುವ ಸಲುವಾಗಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಅದರಂತೆ ಕೋಲಾರ ಜಿಲ್ಲೆ ವ್ಯಾಪ್ತಿಯ 06 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳ ಆಧಾರದ ಮೇರೆಗೆ ಹಾಗೂ ಮೀಸಲಾತಿ ಅನ್ವಯ ನೇರ ನೇಮಕಾತಿ ಪ್ರಕ್ರಿಯೆ ಜರುಗಿಸುವ ಸಂಬಂಧ ಉಲ್ಲೇಖ (3)ರಂತೆ ಈ ಕಛೇರಿಯಿಂದ ಕರಡು ಅಧಿಸೂಚನೆಯನ್ನು ಪ್ರಕಟಿಸಿ ಆಕ್ಷೇಪಣೆ ಮತ್ತು ಸಲಹೆಗಳು ಇದ್ದಲ್ಲಿ ದಿನಾಂಕ:15.06.2022ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಲಾಗಿರುತ್ತದೆ. ಅದರಂತೆ ನಿಗಧಿತ ಅವಧಿಯೊಳಗೆ ಈ ಕಛೇರಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಹಾಗೂ ಇತ್ತೀಚಿನ ಸರ್ಕಾರದ ಸುತ್ತೋಲೆ/ಆದೇಶಗಳನ್ನು ಪರಿಶೀಲಿಸಿ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳ ಸಂಖ್ಯೆ: 04 (ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸುವ ಕನಿಷ್ಠ ವೇತನ)**

| ಹುದ್ದೆ | ವಿದ್ಯಾರ್ಹತೆ | ವಯಸ್ಸು | ಆಯ್ಕೆ ವಿಧಾನ |
|---|---|---|---|
| ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ | 1) ಕನ್ನಡವನ್ನು ಒಂದು ಭಾಷೆಯನ್ನಾಗಿ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆ ಹೊಂದಿರಬೇಕು.<br>2) ಕಂಪ್ಯೂಟರ್ ತರಬೇತಿ ಕೋರ್ಸ್‌ನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ | • ಪ.ಜಾತಿ/ಪ.ಪಂ/ಹಿಂ.ವ-01ಕ್ಕೆ 40 ವರ್ಷಗಳು<br>• ಹಿಂ.ವ-2ಎ,2ಬಿ,3ಎ,3ಬಿ 38 ವರ್ಷಗಳು<br>• ಸಾಮಾನ್ಯ ವರ್ಗಕ್ಕೆ 35 ವರ್ಷಗಳು | ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳು |

8/8

| | | | |
|---|---|---|---|
| | ಮೂರು ತಿಂಗಳು ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. | | |

"ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯ ವರ್ಗೀಕರಣ"

| ಕ್ರ.ಸಂ | ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾ.ಸೈ | ವಿಶೇಷಚೇತನ ಅಭ್ಯರ್ಥಿ | ಒಟ್ಟು ಹುದ್ದೆಗಳು |
|---|---|---|---|---|---|---|---|---|---|
| 1 | ಪ.ಜಾತಿ | 1 | - | - | - | - | - | - | 1 |
| 2 | ಸಾಮಾನ್ಯ | 1 | - | 1 | - | - | - | - | 2 |
| 3 | ಪ.ಪಂ | 1 | - | - | - | - | - | - | 1 |
| | ಒಟ್ಟು | 3 | - | 1 | - | - | - | - | 4 |

ತಾಲ್ಲೂಕುವಾರು ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಕರವಸೂಲಿಗಾರರ ಹುದ್ದೆಯ ವಿವರ

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ.ಹೆಸರು | ಮೀಸಲಾತಿ ವಿವರ |
|---|---|---|---|
| 01 | ಶ್ರೀನಿವಾಸಪುರ | ಕೂರಿಗೇಪಲ್ಲಿ | ಪರಿಶಿಷ್ಟ ಜಾತಿ (ಇತರೆ) |
| 02 | ಮಾಲೂರು | ಮಡಿವಾಳ | ಸಾಮಾನ್ಯ ಅಭ್ಯರ್ಥಿ (ಇತರೆ) |
| 03 | ಕೋಲಾರ | ಮುದುವಾಡಿ | ಪರಿಶಿಷ್ಟ ಪಂಗಡ (ಇತರೆ) |
| 04 | ಮುಳಬಾಗಿಲು | ಮೋತಕಪಲ್ಲಿ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |

2. **ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳ :12 (ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸುವ ಕನಿಷ್ಠ ವೇತನ)**

| ಹುದ್ದೆ | ವಿದ್ಯಾರ್ಹತೆ | ವಯಸ್ಸು | ಆಯ್ಕೆ ವಿಧಾನ |
|---|---|---|---|
| ಡಾಟಾ ಎಂಟ್ರಿ ಆಪರೇಟರ್ | 1) ಕನ್ನಡವನ್ನು ಒಂದು ಭಾಷೆಯನ್ನಾಗಿ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆ ಹೊಂದಿರಬೇಕು.<br>2) ಕಂಪ್ಯೂಟರ್ ತರಬೇತಿ ಕೋರ್ಸ್ ನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ ಆರು ತಿಂಗಳು ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು.<br>3) ಆಯ್ಕೆ ಸಮಿತಿಯು ನಡೆಸುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.<br>4) ಅರ್ಹತಾ ಪರೀಕ್ಷೆಯಲ್ಲಿ ಪಡೆದ 50% ರಷ್ಟು ಅಂಕಗಳನ್ನು ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಡೆದ 50% ರಷ್ಟು ಅಂಕಗಳನ್ನು | • ಪ.ಜಾತಿ/ಪ.ಪಂ/ಹಿಂ.ವರ್ಗ-1 ಕ್ಕೆ 40 ವರ್ಷಗಳು<br>• ಹಿಂ.ವ-2ಎ,2ಬಿ,3ಎ,3ಬಿ 38 ವರ್ಷಗಳು<br>• ಸಾಮಾನ್ಯ ವರ್ಗಕ್ಕೆ 35 ವರ್ಷಗಳು | ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳು ಹಾಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು |

| | | | |
|---|---|---|---|
| | ಒಳಗೊಂಡಿರುವ ಅರ್ಹತೆಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. | | |

"ಡಾಟಾ ಎಂಟ್ರಿ ಆಪರೇಟರ್ ಹುದ್ದೆಯ ವರ್ಗೀಕರಣ"

| ಕ್ರ.ಸಂ | ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾ.ಸೈ | ವಿಶೇಷಚೇತನ ಅಭ್ಯರ್ಥಿ | ಒಟ್ಟು ಹುದ್ದೆಗಳು |
|---|---|---|---|---|---|---|---|---|---|
| 1 | ಪ.ಜಾತಿ | 1 | - | 1 | - | - | - | - | 2 |
| 2 | ಸಾಮಾನ್ಯ | 1 | 2 | 2 | - | - | - | 1 | 6 |
| 3 | 2ಎ | 1 | - | - | - | - | - | - | 1 |
| 4 | 2ಬಿ | - | - | 1 | - | - | - | - | 1 |
| 5 | ಪ.ಪಂ | 1 | - | - | - | - | - | - | 1 |
| 6 | ವರ್ಗ-1 | 1 | - | - | - | - | - | - | 1 |
| | ಒಟ್ಟು | 5 | 2 | 4 | - | - | - | 1 | 12 |

ತಾಲ್ಲೂಕುವಾರು ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯ ವಿವರ

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ.ಹೆಸರು | ಮೀಸಲಾತಿ ವಿವರ |
|---|---|---|---|
| 1 | ಕೋಲಾರ | ಹೋಳೂರು | ಪರಿಶಿಷ್ಟ ಜಾತಿ (ಇತರೆ) |
| 2 | ಶ್ರೀನಿವಾಸಪುರ | ಲಕ್ಷ್ಮೀಸಾಗರ | ಸಾಮಾನ್ಯ ಅಭ್ಯರ್ಥಿ (ಇತರೆ) |
| 3 | ಮಾಲೂರು | ಹಸಾಂಡಹಳ್ಳಿ | ಪರಿಶಿಷ್ಟ ಪಂಗಡ (ಇತರೆ) |
| 4 | ಬಂಗಾರಪೇಟೆ | ಹುನ್ಕುಂದ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |
| 5 | ಕೋಲಾರ | ತೊಟ್ಲಿ | ಪ್ರವರ್ಗ-1 (ಇತರೆ) |
| 6 | ಕೋಲಾರ | ವಡಗೂರು | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) |
| 7 | ಕೋಲಾರ | ದೊಡ್ಡಹಸಾಳ | 2ಎ (ಇತರೆ) |
| 8 | ಕೋಲಾರ | ಅಮ್ಮನಲ್ಲೂರು | ಸಾಮಾನ್ಯ ಅಭ್ಯರ್ಥಿ (ವಿಶೇಷಚೇತನ ಅಭ್ಯರ್ಥಿ) |
| 9 | ಬಂಗಾರಪೇಟೆ | ಚಿನ್ನಕೋಟೆ | ಪರಿಶಿಷ್ಟ ಜಾತಿ (ಮಹಿಳಾ ಅಭ್ಯರ್ಥಿ) |
| 10 | ಕೋಲಾರ | ಜನ್ನಘಟ್ಟ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |
| 11 | ಕೋಲಾರ | ಬೆಳ್ಳೂರು | 2ಬಿ (ಮಹಿಳೆ) |
| 12 | ಕೆ.ಜಿ.ಎಫ್ | ವೆಂಗಸಂದ್ರ | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) |

3. **ಅಟೆಂಡೆಂಟ್ ಹುದ್ದೆಗಳ ಸಂಖ್ಯೆ:30 (ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸುವ ಕನಿಷ್ಠ ವೇತನ)**

| ಹುದ್ದೆ | ವಿದ್ಯಾರ್ಹತೆ | ವಯಸ್ಸು | ಆಯ್ಕೆ ವಿಧಾನ |
|---|---|---|---|
| ಅಟೆಂಡೆಂಟ್ | ಕನ್ನಡವನ್ನು ಒಂದು ವಿಷಯವನ್ನಾಗಿ SSLC ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. | • ಪ.ಜಾತಿ/ಪ.ಪಂ/ಹಿಂ.ವ-01ಕ್ಕೆ 40 ವರ್ಷಗಳು<br>• ಹಿಂ.ವ-2ಎ,2ಬಿ,3ಎ,3ಬಿ 38 ವರ್ಷಗಳು | ನಿಗಧಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳು |

| | | | |
|---|---|---|---|
| | | • ಸಾಮಾನ್ಯ ವರ್ಗಕ್ಕೆ 35 ವರ್ಷಗಳು | |

## "ಅಟೆಂಡೆಂಟ್ ಹುದ್ದೆಯ ವರ್ಗೀಕರಣ"

| ಕ್ರ.ಸಂ | ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾ.ಸೈ | ವಿಶೇಷಚೇತನ ಅಭ್ಯರ್ಥಿ | ಒಟ್ಟು ಹುದ್ದೆಗಳು |
|---|---|---|---|---|---|---|---|---|---|
| 1 | ಪ.ಜಾತಿ | 1 | 1 | 2 | - | - | - | 1 | 5 |
| 2 | ಸಾಮಾನ್ಯ | 3 | 4 | 5 | 1 | - | 1 | 1 | 15 |
| 3 | ಪ.ಪಂ | 1 | - | - | - | - | - | - | 1 |
| 4 | 2(ಎ) | 1 | 1 | 2 | - | - | - | 1 | 5 |
| 5 | 2(ಬಿ) | - | - | 1 | - | - | - | - | 1 |
| 6 | 3(ಎ) | 1 | - | - | - | - | - | - | 1 |
| 7 | 3(ಬಿ) | 1 | - | - | - | - | - | - | 1 |
| 8 | ವರ್ಗ-1 | 1 | - | - | - | - | - | - | 1 |
| | ಒಟ್ಟು | 9 | 6 | 10 | 1 | - | 1 | 3 | 30 |

## ತಾಲ್ಲೂಕುವಾರು ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಅಟೆಂಡೆಂಟ್ ಹುದ್ದೆಯ ವಿವರ

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ.ಹೆಸರು | ಮೀಸಲಾತಿ ವಿವರ |
|---|---|---|---|
| 1 | ಮಾಲೂರು | ಕೊಂಡಶೆಟ್ಟಿಹಳ್ಳಿ | ಪರಿಶಿಷ್ಟ ಜಾತಿ (ಇತರೆ) |
| 2 | ಮಾಲೂರು | ಕುಡಿಯನೂರು | ಸಾಮಾನ್ಯ ಅಭ್ಯರ್ಥಿ (ಇತರೆ) |
| 3 | ಮಾಲೂರು | ಚಿಕ್ಕತಿರುಪತಿ | ಪರಿಶಿಷ್ಟ ಪಂಗಡ (ಇತರೆ) |
| 4 | ಕೋಲಾರ | ವಡಗೂರು | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |
| 5 | ಮಾಲೂರು | ದಿನ್ನಹಳ್ಳಿ | ಪ್ರವರ್ಗ-1 (ಇತರೆ) |
| 6 | ಮಾಲೂರು | ಶಿವಾರಪಟ್ಟಣ | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) |
| 7 | ಕೋಲಾರ | ವಕ್ಕಲೇರಿ | 2ಎ (ಇತರೆ) |
| 8 | ಮುಳಬಾಗಿಲು | ಆಲಂಗೂರು | ಸಾಮಾನ್ಯ ಅಭ್ಯರ್ಥಿ (ವಿಶೇಷಚೇತನ ಅಭ್ಯರ್ಥಿ) |
| 9 | ಮಾಲೂರು | ಲಕ್ಕೂರು | ಪರಿಶಿಷ್ಟ ಜಾತಿ (ಮಹಿಳಾ ಅಭ್ಯರ್ಥಿ) |
| 10 | ಶ್ರೀನಿವಾಸಪುರ | ಪುಲಗೂರುಕೋಟೆ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |
| 11 | ಮಾಲೂರು | ಬನಹಳ್ಳಿ | 2ಬಿ (ಮಹಿಳೆ) |
| 12 | ಮಾಲೂರು | ಹಸಾಂಡಹಳ್ಳಿ | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) |
| 13 | ಕೋಲಾರ | ಸೂಲೂರು | 2ಎ (ಮಹಿಳಾ ಅಭ್ಯರ್ಥಿ) |
| 14 | ಬಂಗಾರಪೇಟೆ | ಆಲಂಬಾಡಿಜೋತೇನಹಳ್ಳಿ | ಸಾಮಾನ್ಯ ಅಭ್ಯರ್ಥಿ (ಇತರೆ) |
| 15 | ಮುಳಬಾಗಿಲು | ಎಮ್ಮೇನತ್ತ | ಪರಿಶಿಷ್ಟ ಜಾತಿ (ಗ್ರಾಮೀಣ ಅಭ್ಯರ್ಥಿ) |
| 16 | ಬಂಗಾರಪೇಟೆ | ಸೂಲಿಕುಂಟೆ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |

8/6

| | | | |
|---|---|---|---|
| 17 | ಕೋಲಾರ | ಸುಗಟೂರು | 3ಎ (ಇತರೆ) |
| 18 | ಶ್ರೀನಿವಾಸಪುರ | ತಾಡಿಗೋಳ್ | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣಾ ಅಭ್ಯರ್ಥಿ) |
| 19 | ಶ್ರೀನಿವಾಸಪುರ | ಜೆ.ತಿಮ್ಮಸಂದ್ರ | 3ಬಿ (ಇತರೆ) |
| 20 | ಕೆ.ಜಿ.ಎಫ್ | ಸುಂದರಪಾಳ್ಯ | ಸಾಮಾನ್ಯ ಅಭ್ಯರ್ಥಿ (ಮಾಜಿ ಸೈನಿಕ) |
| 21 | ಮಾಲೂರು | ಅಬ್ಬೇನಹಳ್ಳಿ | 2ಎ (ಗ್ರಾಮೀಣ ಅಭ್ಯರ್ಥಿ) |
| 22 | ಕೆ.ಜಿ.ಎಫ್ | ಕಮ್ಮಸಂದ್ರ | ಸಾಮಾನ್ಯ ಅಭ್ಯರ್ಥಿ (ಇತರೆ) |
| 23 | ಮಾಲೂರು | ಹುಳದೇನಹಳ್ಳಿ | ಪರಿಶಿಷ್ಟ ಜಾತಿ (ವಿಶೇಷಚೇತನ ಅಭ್ಯರ್ಥಿ) |
| 24 | ಕೆ.ಜಿ.ಎಫ್ | ಶ್ರೀನಿವಾಸಸಂದ್ರ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |
| 25 | ಮುಳಬಾಗಿಲು | ಬೈರಕೂರು | 2ಎ (ವಿಶೇಷಚೇತನ ಅಭ್ಯರ್ಥಿ) |
| 26 | ಕೋಲಾರ | ಚೌಡದೇನಹಳ್ಳಿ | ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ ಅಭ್ಯರ್ಥಿ) |
| 27 | ಮುಳಬಾಗಿಲು | ಹೆಬ್ಬಣಿ | ಪರಿಶಿಷ್ಟಜಾತಿ (ಮಹಿಳಾ ಅಭ್ಯರ್ಥಿ) |
| 28 | ಕೋಲಾರ | ಐತರಾಸನಹಳ್ಳಿ | ಸಾಮಾನ್ಯ ಅಭ್ಯರ್ಥಿ (ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಅಭ್ಯರ್ಥಿ) |
| 29 | ಕೋಲಾರ | ಹೊನ್ನೇನಹಳ್ಳಿ | 2ಎ (ಮಹಿಳಾ ಅಭ್ಯರ್ಥಿ) |
| 30 | ಬಂಗಾರಪೇಟೆ | ಡಿ.ಕೆ.ಹಳ್ಳಿ | ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) |

**ಅರ್ಹತಾ ಷರತ್ತುಗಳು:-**

- ಭಾರತೀಯ ನಾಗರೀಕನಾಗತಕ್ಕದ್ದು.
- ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿ ಅರ್ಹರಾಗಿರುವುದಿಲ್ಲ.
- ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷತೆ ನಿರ್ವಹಣೆಗೆ ಆತಂಕ ಉಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

1) ನಿಗಧಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ.
2) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ:886:ಗ್ರಾಪಂಕಾ:2016 ದಿನಾಂಕ:29.09.2020ರ ಪ್ರಕಾರ ಅಧಿಸೂಚಿಸಿದ ಹುದ್ದೆಗಳ ನೇಮಕಾತಿಗೆ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿದೆ. (ವೆಬ್‌ಸೈಟ್ ನಲ್ಲಿ ಲಭ್ಯವಿದೆ)
3) ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ಓದಿ ಅರ್ಥಯಿಸಿಕೊಂಡು ಅನಂತರವೇ ತಮಗೆ ಅನ್ವಯವಾಗುವ ವಿವರಗಳನ್ನು ಭರ್ತಿ ಮಾಡತಕ್ಕದ್ದು. ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ವಿವರಗಳನ್ನು ತಿದ್ದುಪಡಿ/ಸೇರ್ಪಡೆ ಮಾಡುವಂತೆ ನೀಡುವ ಯಾವುದೇ ಮನವಿಗಳನ್ನು ತಿರಸ್ಕರಿಸಲಾಗುವುದು.
4) ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸತಕ್ಕದ್ದು. ಅನಂತರ ಸಲ್ಲಿಸುವ ಯಾವುದೇ ಅರ್ಜಿಯನ್ನು ಸ್ವೀಕರಿಸುವುದಿಲ್ಲ.
5) ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರಗಳನ್ನು (ಪೂರ್ಣವಾಗಿ) (Discharge certificate) ಮತ್ತು ಪಿಂಚಣಿ ಪಡೆಯುತ್ತಿರುವ ದಾಖಲೆಯ ಪ್ರತಿ/ಮಾಜಿ ಸೈನಿಕ

ಅವಲಂಭಿತರಾಗಿದ್ದಲ್ಲಿ ಮಾಜಿ ಸೈನಿಕರು ಸೇವೆಯಲ್ಲಿರುವಾಗ ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಅಥವಾ ಅಂಗವಿಕಲತೆ ಹೊಂದಿದ ಬಗ್ಗೆ ಪ್ರಮಾಣ ಪತ್ರ ಅರ್ಜಿಯೊಂದಿಗೆ ಸಲ್ಲಿಸುವುದು. (Dependent certificate) (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)

6) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್ ರಿಂದ ಪಡೆದ ಪ್ರಮಾಣ ಪತ್ರ ಅರ್ಜಿಯೊಂದಿಗೆ ಸಲ್ಲಿಸುವುದು (ಮೀಸಲಾತಿ ಕೋರಿದ್ದಲ್ಲಿ)

7) ಸಾಮಾನ್ಯ ಅರ್ಹತೆ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-01 ಮತ್ತು 02ರಲ್ಲಿ/ಇತರೆ ಅಭ್ಯರ್ಥಿಗಳು ನಮೂನೆ-02ರಲ್ಲಿ ಅರ್ಜಿಯೊಂದಿಗೆ ಸಲ್ಲಿಸುವುದು (ಮೀಸಲಾತಿ ಕೋರಿದ್ದಲ್ಲಿ)

8) ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಪ್ರಮಾಣ ಪತ್ರ ಅರ್ಜಿಯೊಂದಿಗೆ ಸಲ್ಲಿಸುವುದು (ಮೀಸಲಾತಿ ಕೋರಿದ್ದಲ್ಲಿ)

9) ವಿಶೇಷಚೇತನ ಮೀಸಲಾತಿ ಪ್ರಮಾಣ ಪತ್ರ ಅರ್ಜಿಯೊಂದಿಗೆ ಸಲ್ಲಿಸುವುದು (ಮೀಸಲಾತಿ ಕೋರಿದ್ದಲ್ಲಿ) ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:149:ಎಸ್‌ಆರ್‌ಆರ್:2020 ಬೆಂಗಳೂರು ದಿನಾಂಕ:25.09.2020ರಲ್ಲಿ ಗ್ರೂಪ್ ಸಿ ಮತ್ತು ಡಿ ಹುದ್ದೆಗಳಿಗೆ ಶೇ.5ರಷ್ಟು ವಿಶೇಷಚೇತನರಿಗೆ ಮೀಸಲಾತಿ ಕಲ್ಪಿಸಿದ್ದು ಇದರನ್ವಯ ಶೇ.40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರಿರುತ್ತಾರೆ. ಅಂಗವೀಕಲತೆಯ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾಮಟ್ಟದ ವೈದ್ಯಕೀಯ ಪ್ರಾಧಿಕಾರ/ ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕದೊಳಗಾಗಿ ಪಡೆದು ಇಟ್ಟುಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

10) **ಅಧಿಸೂಚಿಸಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಆಯಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೊಳಪಡುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.**

11) ಒಂದು ವೇಳೆ ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಕಂಡುಬಂದಲ್ಲಿ ಅವನ/ಅವಳ ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ ಹುದ್ದೆಯಿಂದ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

12) ಅಧಿಸೂಚನೆಯಂತೆ ಆಯಾ ಹುದ್ದೆಗೆ ನಿಗಧಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ, ಇತ್ಯಾದಿಗಳ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿಯನ್ನು ನೀಡುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ. ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೈಗೊಳ್ಳುವುದರಿಂದ ಅರ್ಜಿ ಸಲ್ಲಿಸುವ ಮುನ್ನ ಅರ್ಜಿಯಲ್ಲಿ ನೀಡಿರುವ ಎಲ್ಲಾ ಮಾಹಿತಿಯು ಸರಿಯಾಗಿದೆ ಎಂದು ಖಚಿತಪಡಿಸಿಕೊಂಡು ದೃಢೀಕರಣ ನೀಡುವುದು ಎಚ್ಚರ ವಹಿಸಬೇಕು.

13) ಸದರಿ ಅಧಿಸೂಚನೆಯಲ್ಲಿನ ಹುದ್ದೆಗಳಿಗೆ ಆಯ್ಕೆ ಮಾಡುವವರೆಗೂ ಸರ್ಕಾರ/ಇಲಾಖೆಯಿಂದ ಯಾವುದಾದರೂ ತಿದ್ದುಪಡಿ/ಬದಲಾವಣೆ ಸ್ವೀಕೃತವಾದಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಅದರಂತೆ ಪ್ರಕಟಿಸಲಾಗುವುದು.

14) ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಪ್ರಮಾಣ ಪತ್ರಗಳು ಹಾಗೂ ಮೀಸಲಾತಿ ಪ್ರಮಾಣ ಪತ್ರಗಳು ನಕಲು ಎಂದು ದೃಡಪಟ್ಟಲ್ಲಿ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲಾಗುವುದು.

15) ಅಭ್ಯರ್ಥಿಗಳು ಅರ್ಜಿಯೊಂದಿಗೆ ನಡೆತ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

8/8

16) ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ 6 ತಿಂಗಳು ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು.

17) ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗೆ (ಪಂಚಾಯಿತಿವಾರು) ಆಯ್ಕೆ ಸಮಿತಿಯು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪ್ರತಿಷ್ಠಿತ ಸಂಸ್ಥೆಗಳ ಮೂಲಕ ನಡೆಸಲಾಗುವುದು. ನಂತರದಲ್ಲಿ ಅರ್ಹತಾ ಪರೀಕ್ಷೆಯಲ್ಲಿ ಪಡೆದ 50%ರಷ್ಟು ಅಂಕಗಳು ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಡೆದ 50%ರಷ್ಟು ಅಂಕಗಳನ್ನು ಒಳಗೊಂಡಿರುವ ಅರ್ಹತೆಯ ಆಧಾರದ ಮೇಲೆ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

18) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಇರುವುದಿಲ್ಲ.

19) ಅಧಿಸೂಚನೆಯಲ್ಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕ್ರಿಮಿನಲ್ ಮೊಕದ್ದಮೆ ಇಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ನೀಡತಕ್ಕದ್ದು ಹಾಗೂ ಹುದ್ದೆ ಆಯ್ಕೆಯ ಸಮಯದಲ್ಲಿ ಅಭ್ಯರ್ಥಿಗಳ ಗುಣ ಮತ್ತು ನಡತೆ, ಪೂರ್ವಪರ ಚರಿತ್ರೆ ಹಾಗೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಪೊಲೀಸ್ ಇಲಾಖೆಯ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

20) ಅಧಿಸೂಚಿಸಿದ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಇತರೆ ಯಾವುದೇ ಸರ್ಕಾರಿ/ಖಾಸಗಿ/ಸಂಸ್ಥೆಯಲ್ಲಿ ಹುದ್ದೆ ನಿರ್ವಹಿಸುವಂತಿಲ್ಲ.

21) ಅಧಿಸೂಚಿಸಿದ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿ ಸರ್ಕಾರಕ್ಕೆ ಬೇ-ಬಾಕಿ ಇರಿಸಿಕೊಂಡತಕ್ಕದ್ದಲ್ಲ. ಇದಕ್ಕೆ ಸ್ವಯಂ ದೃಢೀಕರಣ ನೀಡತಕ್ಕದ್ದು.

22) ಅಧಿಸೂಚಿಸಿದ ಹುದ್ದೆಗಳ ವೇತನ ಹಾಗೂ ಇತರ ಭತ್ಯೆಗಳು ಸರ್ಕಾರ/ಕಾರ್ಮಿಕ ಇಲಾಖೆಯಿಂದ ಹೊರಡಿಸುವ ಆದೇಶಕ್ಕೆ ಒಳಪಟ್ಟಿರುತ್ತದೆ.

23) ಆಯ್ಕೆ ಸಮಿತಿಯು ಖಾಲಿ ಇರುವ ಹುದ್ದೆಗಳ ವರ್ಗಗಳಿಗೆ ಸಂಬಂಧಿಸಿದಂತೆ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳನ್ನು ಆಧರಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ಸಮವಾಗಿ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವ ಷರತ್ತುಗಳಿಗೊಳಪಟ್ಟಿರುತ್ತದೆ.

24) ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಆಯ್ಕೆ ಪಟ್ಟಿಯಲ್ಲಿ ನೇಮಕ ಮಾಡಲಾಗುವ ಷರತ್ತುಗಳಿಗೊಳಪಟ್ಟಿರುತ್ತದೆ.

25) ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದು, ಜಿಲ್ಲೆಯನ್ನು ರೋಸ್ಟರ್ ಬಿಂದುಗಾಗಿ ಒಂದು ಯುನಿಟ್ ಎಂದು ಪರಿಗಣಿಸಿ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗನುಸಾರ ಕ್ರಮವಹಿಸುವ ಷರತ್ತುಗಳಿಗೊಳಪಟ್ಟಿರುತ್ತದೆ.

26) ಈ ಮೇಲ್ಕಂಡ ನೇಮಕಾತಿಯು ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ:886:ಗ್ರಾಪಂಕಾ:2016 ದಿನಾಂಕ:29.09.2020ರ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ. ಸದರಿ ಹುದ್ದೆಗಳ ಆಯ್ಕೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಆಯ್ಕೆ ಸಮಿತಿಯ ನಿರ್ಣಯಗಳು ಅಂತಿಮವಾಗಿರುತ್ತವೆ.

27) ತಾತ್ಕಾಲಿಕ ಅಭ್ಯರ್ಥಿ ಪಟ್ಟಿ ಪ್ರಕಟಿಸುವ ಮುನ್ನ ದಾಖಲಾತಿಗಳ ಪರಿಶೀಲನೆ.

- ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಅರ್ಹರಾದ ಕ್ಲೇಮ್ ಮಾಡಿರುವ ಮೀಸಲಾತಿ ಅನುಸಾರ ಅಧಿಸೂಚಿತ ಹುದ್ದೆಗಳ ಅನುಗುಣವಾಗಿ ಅಭ್ಯರ್ಥಿಗಳನ್ನು ಮೇರಿಟ್ ಆಧಾರದ ಮೇಲೆ ದಾಖಲಾತಿಗಳ ಪರಿಶೀಲನೆ.
- ಅಭ್ಯರ್ಥಿಗಳು ಅರ್ಜಿಯೊಂದಿಗೆ ಅರ್ಜಿ ಸಲ್ಲಿಸುವಾಗ ಈ ಅಧಿಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಗಳ ವಿದ್ಯಾರ್ಹತೆ/ಜಾತಿ ಪ್ರಮಾಣ ಪತ್ರ/ಆಧಾರ್ ಕಾರ್ಡ್/ಗುರುತಿನ ಚೀಟಿ/ವಾಸಸ್ಥಳ ದೃಢೀಕರಣ ಪತ್ರದ ನೈಜ್ಯತೆಯನ್ನು ಪರಿಶೀಲನೆಗೆ ಒಳಪಡಿಸಲಾಗುವುದು.

- ಅದರಲ್ಲಿ ಅಭ್ಯರ್ಥಿಯ ನೈಜ್ಯತೆ ದೃಡಪಡದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

28) ಅಧಿಸೂಚಿಸಿರುವ ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸುವ ಎಲ್ಲಾ ಅಗತ್ಯ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು.

29) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:24.08.2022.

**ಅರ್ಜಿ ಸಲ್ಲಿಸಬೇಕಾದ ಸ್ಥಳ : ಆಯಾ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ"**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್ ಕೋಲಾರ.

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:29-09-2020

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 62 ರ ಉಪ ಪ್ರಕರಣ (1)ರ ಖಂಡ 'ಡಿ' ಮತ್ತು ಪ್ರಕರಣ 112 ಮತ್ತು 113 ರೊಡನೆ ಓದಿಕೊಂಡಂತೆ ಪ್ರಕರಣ 311 ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ (ಗ್ರಾಮ ಪಂಚಾಯತಿಯ ಸಿಬ್ಬಂದಿಯ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ರ ಕರಡನ್ನು, ದಿನಾಂಕ:05-03-2020 ರ ಕರ್ನಾಟಕ ರಾಜ್ಯ ಪತ್ರದ ಭಾಗ-IV-A ರಲ್ಲಿ ಪ್ರಕಟಿಸಿ, ಆದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:05-03-2020 ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ;-

## ನಿಯಮಗಳು

1. ಹೆಸರು, ಪ್ರಾರಂಭ ಮತ್ತು ಅನ್ವಯಿಸುವಿಕೆ,- (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳು ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ವ್ಯವಹರಣೆಗೆ ಸಂಬಂಧಿಸಿದಂತೆ ಸರ್ಕಾರ ಅಥವಾ ಪಂಚಾಯತ್ ರಾಜ್ ಆಯುಕ್ತಾಲಯದಿಂದ ನೇಮಕಾತಿ ಮಾಡಲ್ಪಟ್ಟ ಹುದ್ದೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಹುದ್ದೆಗಳ ನೇಮಕಾತಿಗೆ ಅನ್ವಯಿಸುತ್ತವೆ. ಈ ನಿಯಮಗಳಡಿಯಲ್ಲಿ ನೇಮಕಗೊಂಡ ಅಭ್ಯರ್ಥಿಗಳು ಸ್ಥಳೀಯ ಸಂಸ್ಥೆಯ ನೌಕರರು.

2. ಪರಿಭಾಷೆಗಳು,- ಈ ನಿಯಮಗಳಲ್ಲಿ ಸಂದರ್ಭಾನುಸಾರ ಅಗತ್ಯವೆನಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14).



Scanned with CamScanner

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ಗ್ರಾಮ ಪಂಚಾಯತಿ.

(ಸಿ) "ಆಯ್ಕೆ ಸಮಿತಿ" ಎಂದರೆ ನಿಯಮ 4ರಡಿ ರಚಿಸಿರುವ ಸಮಿತಿ.

(ಡಿ) "ನೇರ ನೇಮಕಾತಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಸೇವೆ ಅಥವಾ ಹುದ್ದೆಗೆ ಪದೋನ್ನತಿ, ವರ್ಗಾವಣೆ ಅಥವಾ ನಿಯೋಜನೆ ಹೊರತಾದ ನೇಮಕಾತಿ ಮಾಡುವುದು.

(ಇ) "ಶಿಸ್ತು ಪ್ರಾಧಿಕಾರ" ಎಂದರೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ.

(ಎಫ್) "ಸಿಬ್ಬಂದಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯತಿಯಲ್ಲಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ವರ್ಗದ ಹುದ್ದೆಗೆ ನೇಮಕ ಹೊಂದಿದ ವ್ಯಕ್ತಿ.

ಜಿ) "ಸಾಮಾನ್ಯವಾಗಿ" ಪ್ರತಿಯೊಬ್ಬ ಗ್ರಾಮ ಪಂಚಾಯಿತಿ ನೌಕರನು ಎಲ್ಲಾ ಸಮಯದಲ್ಲೂ ಇರಬೇಕು.

(i) ಸಂಪೂರ್ಣ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು.

(ii) ಕರ್ತವ್ಯ ನಿಷ್ಠೆಯನ್ನು ಕಾಪಾಡಿಕೊಳ್ಳುವುದು ಮತ್ತು

(iii)ಗ್ರಾಮ ಪಂಚಾಯಿತಿ ನೌಕರನಿಗೆ ತರವಲ್ಲದ ಕಾರ್ಯಗಳನ್ನು ಮಾಡಬಾರದು ಹಾಗೂ – ಯಾವುದೇ ಉಲ್ಲಂಘನೆಯು ದುರ್ವರ್ತನೆಯಾಗುತ್ತದೆ.

ಹೆಚ್) "ವಿಚಾರಣಾ ಪ್ರಾಧಿಕಾರ" ಎಂದರೆ ಶಿಸ್ತು ಪ್ರಾಧಿಕಾರದಡಿಯಲ್ಲಿ ಕೆಲಸ ಮಾಡುವ ಯಾವುದೇ ಸರ್ಕಾರಿ ನೌಕರ.

(ಐ) "ಬಡ್ತಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಒಬ್ಬ ಸಿಬ್ಬಂದಿಯನ್ನು ಕೆಳಗಿನ ಹುದ್ದೆ ಅಥವಾ ದರ್ಜೆ ಅಥವಾ ವರ್ಗದ ಸೇವೆಯಿಂದ ಉನ್ನತ ಹುದ್ದೆ ಅಥವಾ ಉನ್ನತ ದರ್ಜೆ ಅಥವಾ ಉನ್ನತ ವರ್ಗದ ಸೇವೆಗೆ ನೇಮಕಾತಿ ಮಾಡುವುದು.

(ಜೆ) "ಷೆಡ್ಯೂಲ್" ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ಷೆಡ್ಯೂಲ್; ಮತ್ತು

(ಕೆ) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ.

3. ನೇಮಕಾತಿ ವಿಧಾನ,– ಷೆಡ್ಯೂಲ್ –1 ರ ಕಲಂ (2) ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಯ ವರ್ಗವನ್ನೊಳಗೊಂಡ ಗ್ರಾಮ ಪಂಚಾಯಿತಿಯ ಒಂದು ಸೇವೆ ಇರತಕ್ಕದ್ದು, ಅವುಗಳ ಹುದ್ದೆಗಳ ಸಂಖ್ಯೆಗಳು, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ ಏನಾದರೂ ಇದ್ದಲ್ಲಿ ಅವುಗಳಿಗೆ ಹೊಂದಿಕೊಂಡಿರುವ ಕಲಂ (3) ಮತ್ತು (4) ರಲ್ಲಿ ನಮೂದಿಸಿರುವಂತೆ ಇರತಕ್ಕದ್ದು.

4. ಆಯ್ಕೆ ಸಮಿತಿ,– (1) ಷೆಡ್ಯೂಲ್–I ರಲ್ಲಿ ನಿರ್ದಿಷ್ಟ ಪಡಿಸಿದಂತೆ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಲುವಾಗಿ ಆಯಾ ಜಿಲ್ಲೆಗಳಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿ ಇರತಕ್ಕದ್ದು, ಅಂದರೆ,–

| | | |
|---|---|---|
| ಎ | ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. | ಅಧ್ಯಕ್ಷರು |
| ಬಿ | ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |
| ಸಿ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ. | ಸದಸ್ಯರು |
| ಡಿ | ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಅಧಿಕಾರಿ. | ಸದಸ್ಯರು |
| ಇ | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. | ಸದಸ್ಯರು |
| ಎಫ್ | ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಗ್ರಾಮ ಪಂಚಾಯಿತಿ ನೌಕರರ ಸೇವಾ ವಿಷಯಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |



Scanned with CamScanner

(2) ಆಯ್ಕೆ ಸಮಿತಿಯು ಕನಿಷ್ಠ 6 ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಮತ್ತು ಸಂಬಂಧಿಸಿದ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಉದ್ಭವವಾಗುವ ಖಾಲಿ ಹುದ್ದೆಗಳ ಬಗ್ಗೆ ಪುನರಾವಲೋಕಿಸುವುದು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ಪೂರ್ವಾನುಮತಿ ಪಡೆದು ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕ್ರಮ ವಹಿಸತಕ್ಕದ್ದು.

(3) ಆಯ್ಕೆ ಸಮಿತಿಯು ನೇರ ನೇಮಕಾತಿಗಾಗಿ ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವಿಧಾನವನ್ನು ಅನುಸರಿಸುವುದು.

(4) ಆಯ್ಕೆ ಸಮಿತಿಯು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಮಾಹಿತಿಯನ್ನು ಪಡೆದು ಹುದ್ದೆಯ ವರ್ಗ, ವಯೋಮಿತಿ, ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನಿಗದಿಪಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಕನಿಷ್ಠ ಒಂದು ಕನ್ನಡ ದಿನ ಪತ್ರಿಕೆಯನ್ನೊಳಗೊಂಡಂತೆ ಜಿಲ್ಲೆಯಲ್ಲಿ ಹೆಚ್ಚು ಪ್ರಸಾರದಲ್ಲಿರುವ ದಿನ ಪತ್ರಿಕೆಗಳಲ್ಲಿ, ನೇಮಕಾತಿಗಾಗಿ ಜಾಹೀರಾತು ಪ್ರಕಟ ಪಡಿಸತಕ್ಕದ್ದು.

(5) ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ವ್ಯಕ್ತಿಗಳು ಆಯಾ ಗ್ರಾಮ ಪಂಚಾಯತಿ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರತಕ್ಕದ್ದು.

(6) ವಯೋಮಿತಿ:- ನೇಮಕಾತಿ ನಿಯಮಗಳಲ್ಲಿ ವಿಶೇಷವಾಗಿ ಒದಗಿಸಲಾದ ಮತ್ತು ಯಾವುದೇ ಸೇವೆ ಅಥವಾ ಹೆಚ್ಚಿನ ವಯಸ್ಸಿನ ಮಿತಿಯನ್ನು ಸೂಚಿಸುವ ಹುದ್ದೆಗೆ ಅನ್ವಯಿಸಿದಂತೆ ಹೊರತುಪಡಿಸಿ, ನೇರ ನೇಮಕಾತಿಯ ಮೂಲಕ ನೇಮಕಾತಿಗಾಗಿ ಪ್ರತಿಯೊಬ್ಬ ಅಭ್ಯರ್ಥಿಯು ಅರ್ಜಿಗಳನ್ನು ಸ್ವೀಕೃತಿಗಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಹದಿನೆಂಟು ವರ್ಷಗಳಿಗೆ ಕಡಿಮೆ ಇಲ್ಲದಂತೆ ಮತ್ತು ಈ ಕೆಳಕಂಡ ವಯಸ್ಸನ್ನು ಮೀರದಂತ ವಯೋಮಿತಿಯಲ್ಲಿರತಕ್ಕದ್ದು.

ಎ) ಯಾವುದೇ ಸಂದರ್ಭದಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ಅಥವಾ ಹಿಂದುಳಿದ ವರ್ಗ-I ಕ್ಕೆ ಸೇರಿದ ವ್ಯಕ್ತಿಗೆ ಸಂಬಂಧಿಸಿದಂತೆ ನಲವತ್ತು ವರ್ಷಗಳು;

ಬಿ) ಹಿಂದುಳಿದ ವರ್ಗಗಳ ಯಾವುದೇ ವರ್ಗ IIಎ ಅಥವಾ IIಬಿ, ವರ್ಗ IIIಎ ಅಥವಾ IIIಬಿ ಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದಂತೆ ಮೂವತ್ತೆಂಟು ವರ್ಷಗಳು; ಮತ್ತು

ಸಿ) ಬೇರೆ ಯಾವುದೇ ಸಾಮಾನ್ಯ ವರ್ಗದ ವ್ಯಕ್ತಿಗೆ ಸಂಬಂಧಿಸಿದಂತೆ ಮೂವತ್ತೈದು ವರ್ಷಗಳು;

**5. ಆಯ್ಕೆ ವಿಧಾನ,-** (1) ಆಯ್ಕೆ ಸಮಿತಿಯು ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಮ್ ಡಾಟಾ ಎಂಟ್ರಿ ಆಪರೇಟರ್ ಅಥವಾ ಡಾಟಾ ಎಂಟ್ರಿ ಆಪರೇಟರ್ ಅಥವಾ ವಾಟರ್ ಆಪರೇಟರ್, ಅಟೆಂಡೆಂಟ್ ಮತ್ತು ಕ್ಲೀನರ್ ವರ್ಗಗಳಿಗೆ ಸಂಬಂಧಿಸಿದಂತೆ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ಸಮನಾಗಿ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.

(2) ಜಿಲ್ಲೆಯನ್ನು ರೋಸ್ಟರ್‌ಗಾಗಿ ಒಂದು ಯೂನಿಟ್ ಎಂದು ಪರಿಗಣಿಸಿ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳಿಗನುಸಾರ ನೇರ ನೇಮಕಾತಿ ಕೋಟಾದ ಮೀಸಲಾತಿ ನೀತಿಯನ್ನು ಅನುಸರಿಸತಕ್ಕದ್ದು.

(3) ಪ್ರತಿಯೊಂದು ವರ್ಗದ ಹುದ್ದೆಗಳಿಗೆ ರೋಸ್ಟರ್ ಬಿಂದುವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುತ್ತದೆ. ಇದಲ್ಲದೇ, ಖಾಲಿ ಹುದ್ದೆ ಸೃಷ್ಟಿಯಾದ ದಿನಾಂಕದ ಆಧಾರದ ಮೇಲೆ ರೋಸ್ಟರ್ ಬಿಂದು ನಿಗಧಿಪಡಿಸತಕ್ಕದ್ದು. ಎರಡಕ್ಕೂ ಹೆಚ್ಚು ಖಾಲಿ ಹುದ್ದೆಗಳು ಒಂದೇ ದಿನಾಂಕದಂದು ಉದ್ಭವಿಸಿದರೆ, ಕನ್ನಡ ವರ್ಣಮಾಲೆಯಂತೆ ಗ್ರಾಮ ಪಂಚಾಯಿತಿ ಹೆಸರುಗಳ ಆಧಾರದ ಮೇಲೆ ಮೀಸಲಾತಿ ನಿಗಧಿಯಾಗುತ್ತದೆ.



Scanned with CamScanner

(4) ಆಯ್ಕೆ ಸಮಿತಿಯು ಉಪನಿಯಮ (1) ರಲ್ಲಿ ಅಧಿಸೂಚಿಸಿದ ಖಾಲಿ ಹುದ್ದೆಗಳ ಶೇಕಡಾ ಹತ್ತರಷ್ಟನ್ನು ಮೀರದಂತೆ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಹ ತಯಾರಿಸತಕ್ಕದ್ದು.

(5) ನೇಮಕಾತಿ ಪ್ರಾಧಿಕಾರವು ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಗೊಂಡ ಅಭ್ಯರ್ಥಿಗಳನ್ನು ಈ ಕೆಳಗಿನ ದಾಖಲೆಗಳನ್ನು ಪರಿಶೀಲಿಸಿದ ನಂತರ ಆಯ್ಕೆ ಪಟ್ಟಿಯಲ್ಲಿ ನೇಮಕ ಮಾಡತಕ್ಕದ್ದು.

a) ಜನನ ಪ್ರಮಾಣ ಪತ್ರ.

b) ಅರ್ಹತಾ ಪರೀಕ್ಷೆ ಅಂಕ ಪಟ್ಟಿಗಳು.

c) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ತಹಶೀಲ್ದಾರ್ ನೀಡಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು.

d) ದೈಹಿಕವಾಗಿ ಅಂಗವಿಕಲ ಪ್ರಮಾಣ ಪತ್ರಗಳು.

e) ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಮಾಜಿ ಸೈನಿಕರು, ಯೋಜನೆಯ ಸ್ಥಳಾಂತರಗೊಂಡ ವ್ಯಕ್ತಿಗಳ ಕುಟುಂಬದ ಸದಸ್ಯರು, ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳು.

f) ಅಭ್ಯರ್ಥಿಗಳ ಪೂರ್ವಾಪರಗಳು.

ಆಯ್ಕೆ ಪಟ್ಟಿಯಲ್ಲಿ ಹೆಸರನ್ನು ಸೇರಿಸುವುದರಿಂದ ಅಭ್ಯರ್ಥಿಗಳು ಯಾವುದೇ ನೇಮಕಾತಿ ಹಕ್ಕು ಹೊಂದುವುದಿಲ್ಲ.

**6. ಬಡ್ತಿ ಮೂಲಕ ನೇಮಕಾತಿ.-** ಎಲ್ಲಾ ಬಡ್ತಿಗಳು ಒಟ್ಟುಗೂಡಿಸಿದ ಜೇಷ್ಠತೆಯ ಆಧಾರದ ಮೇಲೆ ಇರತಕ್ಕದ್ದು. ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಬಡ್ತಿ ನೀಡುವ ಮುನ್ನ ಗ್ರಾಮ ಪಂಚಾಯಿತಿವಾರು ಒಟ್ಟುಗೂಡಿಸಿದ ಜೇಷ್ಠತಾ ಪಟ್ಟಿಯನ್ನು ಸಂಬಂಧಿಸಿದ ವರ್ಗದಲ್ಲಿ ಸಲ್ಲಿಸಿದ ಸೇವೆಯ ಅವಧಿಯ ಆಧಾರದ ಮೇಲೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಯಾರಿಸತಕ್ಕದ್ದು.

**7. ಸೇವಾ ಷರತ್ತುಗಳು.-** ಈ ನಿಯಮಗಳ ಅಡಿಯಲ್ಲಿ ನೇಮಕಾತಿ ಹೊಂದಿದ ನೌಕರನಿಗೆ ಈ ಕೆಳಕಂಡ ಸೇವಾ ಷರತ್ತುಗಳು ಅನ್ವಯವಾಗತಕ್ಕದ್ದು, ಎಂದರೆ,-

(i) ನೌಕರನ ಸೇವಾ ಪುಸ್ತಕವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನಿರ್ವಹಿಸತಕ್ಕದ್ದು.

(ii) ನೌಕರರಿಗೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಾರ್ಷಿಕವಾಗಿ 10 ದಿನಗಳ ಸಾಂದರ್ಭಿಕ ರಜೆ ಮತ್ತು 2 ದಿನಗಳ ನಿರ್ಬಂಧಿತ ರಜೆ ಮತ್ತು 30 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

(iii) ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಿವಾಹಿತ ಮಹಿಳೆಯರಿಗೆ 180 ದಿನಗಳ ಪ್ರಸೂತಿ ರಜೆ ಮತ್ತು ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆಯನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

(iv) ಗ್ರಾಮ ಪಂಚಾಯಿತಿಯ ಪ್ರತಿ ನೌಕರನು 60 ವರ್ಷ ವಯಸ್ಸನ್ನು ಪೂರೈಸಿದಾಗ ಸೇವೆಯಿಂದ ನಿವೃತ್ತಿ ಹೊಂದತಕ್ಕದ್ದು ; ಮತ್ತು

(v) ನೌಕರರು ಪ್ರತಿ ವರ್ಷಕ್ಕೆ 15 ದಿನಗಳ ವೇತನದಂತೆ ಒಟ್ಟು 20 ತಿಂಗಳ ವೇತನ ಮೀರದಂತೆ ಮರಣ ಮತ್ತು ನಿವೃತ್ತಿ ಉಪದಾನ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.



Scanned with CamScanner

8. ಶಿಸ್ತು ಪ್ರಾಧಿಕಾರ,- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಕರಣ 62(ಡಿ) ಮತ್ತು ಪ್ರಕರಣ 113 ರಲ್ಲಿ ಏನೇ ಒಳಗೊಂಡಿದ್ದರೂ, ತಪ್ಪು ಮಾಡಿದ ನೌಕರರ ವಿರುದ್ಧ ಶಿಸ್ತು ಮವನ್ನು ಪ್ರಾರಂಭಿಸತಕ್ಕದ್ದು.

(ಅ) ಗ್ರಾಮ ಪಂಚಾಯಿತಿಯ ತಪ್ಪು ಮಾಡಿದ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸುವುದು ಮತ್ತು "ದಂಡ ಅಥವಾ ವೇತನ ಬಡ್ತಿಯನ್ನು ತಡೆ ಹಿಡಿಯುವುದು" ವಿಧಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಶಿಸ್ತು ಪ್ರಾಧಿಕಾರಕ್ಕೆ ಅಧಿಕಾರ ನೀಡಲಾಗುವುದು.

(ಆ)ಗ್ರಾಮ ಪಂಚಾಯಿತಿಯ ಅಧ್ಯಕ್ಷನಿಗೆ ಗ್ರಾಮ ಪಂಚಾಯಿತಿಯ ನೌಕರರನ್ನು ಅಮಾನತುಗೊಳಿಸುವುದಕ್ಕೆ ಅಧಿಕಾರ ನೀಡಲಾಗುತ್ತದೆ. ಅಲ್ಲಿ ಅವನ ವಿರುದ್ಧ ಶಿಸ್ತು ಕ್ರಮವನ್ನು ಆಲೋಚಿಸುವುದು ಅಥವಾ ಬಾಕಿ ಇರಿಸುವುದು ಅಥವಾ ಯಾವುದೇ ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದಂತೆ ಆತನ ವಿರುದ್ಧದ ಪ್ರಕರಣವು ತನಿಖೆ ಅಥವಾ ವಿಚಾರಣೆಯಲ್ಲಿದ್ದರೆ.

(ಇ) ನೌಕರನ ಶ್ರೇಣಿಯನ್ನು ಕಡಿಮೆ ಮಾಡಲು, ಸೇವೆಯಿಂದ ತೆಗೆದುಹಾಕಲು ಅಥವಾ ವಜಾಗೊಳಿಸಲು ಗ್ರಾಮ ಪಂಚಾಯಿತಿಗೆ ಅಧಿಕಾರವಿದೆ.

(2) **ಅನುಸರಿಸಬೇಕಾದ ಕಾರ್ಯವಿಧಾನ** :- 1) ಶಿಸ್ತು ಪ್ರಾಧಿಕಾರವು ತಾನು ಸ್ವತಃ ಅಥವಾ ಇತರರ ಮುಖಾಂತರ;

(i) ನೌಕರನು ಮಾಡಿರುವ ತಪ್ಪು ನಡತೆ ಅಥವಾ ಕೆಟ್ಟ ನಡೆಯನ್ನು ನಿರ್ದಿಷ್ಟವಾದ ಆರೋಪವನ್ನಾಗಿ ತಯಾರಿಸುವುದು.

ii) ಪ್ರತಿ ಆರೋಪಗಳಿಗೆ ಅಥವಾ ಆರೋಪಗಳನ್ನು ಬೆಂಬಲಿಸುವ ಅಥವಾ ಪ್ರತಿಯೊಂದು ದುಷ್ಕೃತ್ಯದ ಆರೋಪಗಳಿಗೆ.

(ಎ)ನೌಕರನು ಮಾಡಿದ ಯಾವುದೇ ನಿವೇದನೆ ಅಥವಾ ತಪ್ಪೊಪ್ಪಿಗೆಯನ್ನು ಒಳಗೊಂಡಂತೆ ಎಲ್ಲಾ ಸಂಬಂಧಿತ ಸಂಗತಿಗಳ ಹೇಳಿಕೆ ದಾಖಲಿಸಬಹುದಾಗಿದೆ.

(ಬಿ) ದೋಷಾರೋಪಗಳಿಗೆ (ಚಾರ್ಜ್‌ಗಳಿಗೆ) ಅವಶ್ಯಕವಾದ ದಾಖಲೆ ಮತ್ತು ಸಾಕ್ಷಿಗಳ ಪಟ್ಟಿಗಳನ್ನು ಬಳಸಿಕೊಳ್ಳಬಹುದಾಗಿದೆ.

2) ಶಿಸ್ತು ಪ್ರಾಧಿಕಾರವು ನೌಕರನಿಗೆ ದೋಷಾರೋಪದ (ಚಾರ್ಜ್) ಪಟ್ಟಿಯನ್ನು ಹಾಗೂ ದುಷ್ಕೃತ್ಯ ಅಥವಾ ದುರುಪಯೋಗದ ಆರೋಪಗಳ ಹೇಳಿಕೆ ಮತ್ತು ಪ್ರತಿ ದೋಷಾರೋಪದ (ಚಾರ್ಜ್) ಪಟ್ಟಿಯಲ್ಲಿ ಪ್ರಸ್ತಾಪಿಸುವ ದಾಖಲೆ ಮತ್ತು ಸಾಕ್ಷಿಗಳ ಪಟ್ಟಿಯನ್ನು ಜಾರಿಗೊಳಿಸುವುದು ಅಥವಾ ಜಾರಿಗೊಳಿಸಲು ಕ್ರಮ ವಹಿಸುವುದು ಹಾಗೂ ನೌಕರನು ನಿಗಧಿತ ಸಮಯದೊಳಗೆ ರಕ್ಷಣಾ ಹೇಳಿಕೆ ಸಲ್ಲಿಸಲು ಹಾಗೂ ವಿಚಾರಣೆ ನಡೆಸಲು ಅಗತ್ಯತೆಯ ಬಗ್ಗೆ ತಿಳಿಸುವಂತೆ ಸೂಚಿಸುವುದು.

3) ಎ) ಶಿಸ್ತು ಪ್ರಾಧಿಕಾರವು ಆರೋಪಿ ನೌಕರರ ರಕ್ಷಣಾ ಹೇಳಿಕೆಯನ್ನು ಸ್ವೀಕರಿಸಿದ ನಂತರ ತಾವೇ ವಿಚಾರಣೆಯನ್ನು ಯಾವುದೊಂದು ಆರೋಪಗಳನ್ನು ಒಪ್ಪಿರುವುದಿಲ್ಲವೋ ಅಂತಹ ಆರೋಪಗಳಿಗೆ ಸಂಬಂಧಿಸಿದಂತೆ ಮಾಡಬಹುದು ಅಥವಾ ತಮಗೆ ಅಗತ್ಯವೆಂದು ಕಂಡು ಬಂದರೆ ಮತ್ತೊಬ್ಬ ವಿಚಾರಣಾಧಿಕಾರಿಯನ್ನು



Scanned with CamScanner

ನೇಮಿಸಬಹುದು. ಯಾವುದೊಂದು ಪ್ರಕರಣದಲ್ಲಿ ಆರೋಪಿ ನೌಕರನು ತಮ್ಮ ಲಿಖಿತ ಹೇಳಿಕೆಯಲ್ಲಿ ಆರೋಪಗಳನ್ನು ಒಪ್ಪಿಕೊಂಡಿದ್ದಾದ್ದಲ್ಲಿ ಅಂತಹ ಆರೋಪಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿ ಪ್ರತಿಯೊಂದು ಆರೋಪಗಳಿಗೆ ತಮ್ಮ ತೀರ್ಮಾನವನ್ನು ದಾಖಲಿಸಿ ಮೇಲಿನ ಉಪ ನಿಯಮ (1) ರಂತೆ ಕ್ರಮವಹಿಸತಕ್ಕದ್ದು.

ಬಿ) ನೌಕರನಿಂದ ಯಾವುದೇ ಲಿಖಿತ ಹೇಳಿಕೆಯು ಸಲ್ಲಿಕೆಯಾಗದಿದ್ದರೆ, ಶಿಸ್ತು ಪ್ರಾಧಿಕಾರವು ದೋಷಾರೋಪಣಾ ಪಟ್ಟಿಗೆ ಸಂಬಂಧಿಸಿದಂತೆ ತಾನೇ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣಾಧಿಕಾರಿಯನ್ನು ನೇಮಿಸಬಹುದು.

ಸಿ) ವಿಚಾರಣಾ ಪ್ರಾಧಿಕಾರವು ಆರೋಪಿ ನೌಕರನಿಗೆ ಸಾಕಷ್ಟು ಅವಕಾಶಗಳನ್ನು ನೀಡಿ, ತಾನು ಒಪ್ಪಿಕೊಳ್ಳದಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸತಕ್ಕದ್ದು. ವಿಚಾರಣಾ ಪ್ರಾಧಿಕಾರವು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸಾಕ್ಷಿಗಳ ಹೇಳಿಕೆಯನ್ನು ಪಡೆಯುವುದು ಮತ್ತು ನೌಕರನಿಗೆ ಪಾಟೀ ಸವಾಲ್ ಮಾಡಲು ಅವಕಾಶ ನೀಡುವುದು. ವಿಚಾರಣೆಯ ಆಧಾರದ ಮೇಲೆ ವಿಚಾರಣಾ ಪ್ರಾಧಿಕಾರವು ವಿಚಾರಣಾ ವರದಿಯನ್ನು ತಯಾರಿಸತಕ್ಕದ್ದು. ಅದರಲ್ಲಿ ಸ್ಪಷ್ಟವಾಗಿ ಆರೋಪವು ಸಾಬೀತಾಗಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಶಿಸ್ತು ಪ್ರಾಧಿಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸತಕ್ಕದ್ದು. ಶಿಸ್ತು ಪ್ರಾಧಿಕಾರವು ತಾನೇ ವಿಚಾರಣಾ ಪ್ರಾಧಿಕಾರವಾದರೆ ಇದೇ ಪದ್ಧತಿಯನ್ನು ಅನುಸರಿಸಿ ವಿಚಾರಣಾ ವರದಿಯನ್ನು ಸಿದ್ಧಪಡಿಸತಕ್ಕದ್ದು.

3) ವಿಚಾರಣಾ ವರದಿಯ ಮೇಲೆ ಕ್ರಮ:-

ಎ) ಶಿಸ್ತು ಪ್ರಾಧಿಕಾರವು ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಲಭ್ಯವಿರುವ ದಾಖಲೆಗಳು, ಸಾಕ್ಷಿಗಳ ಹೇಳಿಕೆಗಳು ಮತ್ತು ತನ್ನ ಸಕಾರಣಗಳನ್ನು ಲಿಖಿತವಾಗಿ ದಾಖಲಿಸಿದಂತೆ ತನ್ನ ಅಭಿಪ್ರಾಯದಲ್ಲಿ ವಿಚಾರಣಾ ವರದಿಯನ್ನು ಒಪ್ಪಲಾಗಿದೆಯೇ ಅಥವಾ ತಿರಸ್ಕರಿಸಲಾಗಿದೆಯೇ ಅಥವಾ ವರದಿಯನ್ನು ಮತ್ತೆ ಮುಂದಿನ ವಿಚಾರಣೆಗಾಗಿ ವಿಚಾರಣಾಧಿಕಾರಿಗೆ ಹಿಂದಿರುಗಿಸಲಾಗಿದೆಯೇ ಎಂದು ಸ್ಪಷ್ಟವಾಗಿ ದಾಖಲಿಸತಕ್ಕದ್ದು.

ಬಿ) ದೋಷಾರೋಪಣೆಯು ಸಾಬೀತಾಗಿದ್ದರೆ ಮತ್ತು ಶಿಸ್ತು ಪ್ರಾಧಿಕಾರವು ಅಂತಹ ವಿಚಾರಣಾ ವರದಿಯನ್ನು ಅಂಗೀಕರಿಸಿದ್ದರೆ, ಆರೋಪಿ ನೌಕರನಿಗೆ ಎರಡನೇ ಕಾರಣ ಕೇಳುವ ನೋಟೀಸ್‌ನ್ನು ಸಾಕಷ್ಟು ಕಾಲಾವಕಾಶದೊಂದಿಗೆ ತನ್ನ ವಿವರಣೆಯನ್ನು ನೀಡಲು ತಿಳಿಸಿ ಜಾರಿ ಮಾಡತಕ್ಕದ್ದು. ವಿವರಣೆಯನ್ನು ಸ್ವೀಕರಿಸಿದ ನಂತರ ಅಥವಾ ಆರೋಪಿ ನೌಕರನು ನಿಗಧಿಪಡಿಸಿದ ಅವಧಿಯೊಳಗೆ ವಿವರಣೆ ನೀಡಲು ವಿಫಲರಾದ ಸಂದರ್ಭದಲ್ಲಿ ತನ್ನ ತೀರ್ಮಾನವನ್ನು ಲಭ್ಯವಿರುವ ಆಧಾರಗಳ ಮೇಲೆ ತೆಗೆದುಕೊಳ್ಳತಕ್ಕದ್ದು.

ಸಿ) ಶಿಸ್ತು ಪ್ರಾಧಿಕಾರವು ದೋಷಾರೋಪಣೆಯು ಸಾಬೀತಾಗಿದೆಯೆಂಬ ತೀರ್ಮಾನಕ್ಕೆ ಬಂದು ಮತ್ತು ಅಂತಹ ಆರೋಪಗಳು ಗಂಭೀರ ಸ್ವರೂಪವಲ್ಲದ ರೀತಿಯದ್ದು ಎಂದು ಭಾವಿಸಿದರೆ ತಾನೇ ದಂಡ (Fine) ಅಥವಾ ನೌಕರನಿಗೆ ವೇತನ ಬಡ್ತಿಯನ್ನು ತಡೆ ಹಿಡಿಯುವ ದಂಡನೆಯನ್ನು ವಿಧಿಸಬಹುದು. ಶಿಸ್ತು ಪ್ರಾಧಿಕಾರದ ಅಭಿಪ್ರಾಯದಲ್ಲಿ ಮಾಡಿರುವಂತಹ ದೋಷಾರೋಪಣೆಯು ಗಂಭೀರ ಸ್ವರೂಪದೆಂಬ ತೀರ್ಮಾನಕ್ಕೆ ಬಂದರೆ ಅಂತಹ ದೋಷಾರೋಪಣೆಗಳ ಬಗ್ಗೆ ಒಂದು ಸ್ವಯಂವೇದ್ಯ ಟಿಪ್ಪಣಿಯನ್ನು ವಿಧಿಸಬಹುದಾದ ದಂಡನೆಯ ಬಗ್ಗೆ ತನ್ನ ಶಿಫಾರಸ್ಸಿನೊಂದಿಗೆ ಮುಂದಿನ ಮುಂದಿನ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸತಕ್ಕದ್ದು. ಗ್ರಾಮ ಪಂಚಾಯಿತಿ ಈ ವಿಚಾರದ ಬಗ್ಗೆ ಚರ್ಚಿಸಿ ತಮ್ಮ ಸಕಾರಣಗಳನ್ನು ನಡವಳಿಯಲ್ಲಿ ದಾಖಲಿಸಿ ನೌಕರನನ್ನು ಕೆಲಸದಿಂದ ತೆಗೆಯುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು.

ಡಿ) ಶಿಸ್ತು ಪ್ರಾಧಿಕಾರವು ಗ್ರಾಮ ಪಂಚಾಯಿತಿಯ ತೀರ್ಮಾನವನ್ನು ಜಾರಿ ಮಾಡತಕ್ಕದ್ದು.

**4) ಇತರೆ ತನಿಖಾ ಸಂಸ್ಥೆಗಳ ಶಿಫಾರಸ್ಸಿನ ಮೇಲೆ ಕ್ರಮ:-** ಸಾರ್ವಜನಿಕ ದೂರುಗಳ ಆಧಾರದ ಮೇಲೆ ಲೋಕಾಯುಕ್ತ ಅಥವಾ ಭ್ರಷ್ಟಾಚಾರ ನಿಗ್ರಹ ದಳವು ತನಿಖೆಯನ್ನು ಕೈಗೊಂಡು ಗ್ರಾಮ ಪಂಚಾಯಿತಿ ನೌಕರನ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡಿದರೆ;



Scanned with CamScanner

[illegible] ಶಿಸ್ತು ಪ್ರಾಧಿಕಾರವು ಉಪ ನಿಯಮ 8(2) ರಡಿಯಲ್ಲಿ ಕ್ರಮವನ್ನು ಪ್ರಾರಂಭಿಸತಕ್ಕದ್ದು.

ii) ಲೋಕಾಯುಕ್ತವು ಅಂತಹ ನೌಕರನ ವಿರುದ್ಧ ಮಾಡಲಾಗಿರುವ ಆರೋಪಗಳ ಬಗ್ಗೆ ವಿಚಾರಣೆಯನ್ನು ನಡೆಸಲು ಅನುಮತಿಯನ್ನು ಕೋರಬಹುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಲಭ್ಯವಿರುವ ದಾಖಲೆ ಮತ್ತು ಮಾಡಲಾಗಿರುವ ಆರೋಪಗಳನ್ನು ಪರಿಶೀಲಿಸಿದ ನಂತರ ಮೇಲ್ನೋಟಕ್ಕೆ ಅಂತಹ ಆರೋಪಗಳು ಸತ್ಯವೆಂದು ಅಭಿಪ್ರಾಯಕ್ಕೆ ಬಂದರೆ ಅಂತಹ ಆರೋಪಗಳ ಮೇಲೆ ವಿಚಾರಣೆಯನ್ನು ಕೈಗೊಳ್ಳಲು ಲೋಕಾಯುಕ್ತಕ್ಕೆ ಅನುಮತಿಸಬಹುದು.

iii) ವಿಚಾರಣೆಯ ನಂತರ ಲೋಕಾಯುಕ್ತವು ಮಾಡುವ ಶಿಫಾರಸ್ಸುಗಳನ್ನು ಅಂಗೀಕರಿಸುವುದು ಗ್ರಾಮ ಪಂಚಾಯಿತಿಗಳಿಗೆ ಕಡ್ಡಾಯವಾಗಿರುತ್ತದೆ.

8. ಮೇಲ್ಮನವಿ :-

i) ಈ ನಿಯಮಗಳ ಉಪಬಂಧ 8(1)(ಎ) ಅಡಿಯಲ್ಲಿ ಹೊರಡಿಸಿದ ಆದೇಶಗಳಿಗೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ.

ii) ಈ ನಿಯಮಗಳ ಉಪಬಂಧ 8(1)(ಬಿ) ಅಡಿಯಲ್ಲಿ ಹೊರಡಿಸಿದ ಆದೇಶಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ.

**9. ಅನುಕಂಪದ ಆಧಾರ ಮೇಲೆ ನೇಮಕಾತಿಗಳು.-** ಗ್ರಾಮ ಪಂಚಾಯಿತಿಯ ನೌಕರನು ಅಕಾಲಿಕ ಮರಣಕ್ಕೆ ತುತ್ತಾದ ಸಂಧರ್ಭದಲ್ಲಿ ಮೃತ ನೌಕರನ ಅವಲಂಬಿತರು ಮುಂದಿನ ಷರತ್ತುಗಳಿಗೊಳಪಟ್ಟು ನೇಮಕಾತಿಗೆ ಅರ್ಹರಾಗಿರುತ್ತಾರೆ :

1. ನೌಕರನ ಸಾವು ಸಂಭವಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಹ ವ್ಯಕ್ತಿಯು ಹುದ್ದೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. **ನೇಮಕಾತಿಗೆ ಅರ್ಹತೆ :**
   1. ಈ ನಿಯಮಗಳಡಿಯಲ್ಲಿ ನೇಮಕಾತಿಗಳನ್ನು ತನ್ನ ಹಕ್ಕು ಎಂದು ಭಾವಿಸತಕ್ಕದ್ದಲ್ಲ ಮತ್ತು ಅದನ್ನು ಸಹಜವಾಗಿ ನೀಡಲಾಗುವುದಿಲ್ಲ.
   2. ಈ ನಿಯಮಗಳಡಿಯಲ್ಲಿ ನೇಮಕಾತಿಯು ಮೃತ ಗ್ರಾಮ ಪಂಚಾಯಿತಿ ನೌಕರನ ಅವಲಂಬಿತರಿಗೆ ಈ ಕೆಳಕಂಡ ಅದ್ಯತೆಯ ಆಧಾರದ ಮೇಲೆ ನೀಡಲಾಗುವುದು.

i) ಮೃತನು ಗ್ರಾಮ ಪಂಚಾಯಿತಿಯ ಪುರುಷ ನೌಕರನಾಗಿದ್ದಲ್ಲಿ :

ಎ) ವಿಧವೆ;

ಬಿ) ಮಗ, ವಿಧವೆಯು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವಳು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ ;

ಸಿ) ಅವಿವಾಹಿತ ಮಗಳು, ವಿಧವೆ ಅಥವಾ ಮಗ ಇಬ್ಬರೂ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ :

ಡಿ) ವಿಧವೆಯಾಗಿರುವ ಮಗಳು, ವಿಧವೆ, ಮಗ ಅಥವಾ ಅವಿವಾಹಿತ ಮಗಳು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ ;



Scanned with CamScanner

**(ia) ಮದುವೆಯಾಗದ ಪುರುಷ ಗ್ರಾಮ ಪಂಚಾಯಿತಿಯ ನೌಕರನು ಮೃತನಾದರೆ :**

ಎ) ಅವಿವಾಹಿತ ಸಹೋದರ.

ಬಿ) ಅವಿವಾಹಿತ ಅಥವಾ ವಿಧವೆಯಾಗಿರುವ ಸಹೋದರಿ.

ಮೃತ ನೌಕರನ ಮೇಲೆ ತಮ್ಮ ಬದುಕಿಗಾಗಿ ಅವಲಂಬಿತರಾಗಿರುವವರು.

**(ii) ಮೃತ ಗ್ರಾಮ ಪಂಚಾಯಿತಿ ನೌಕರರು ಮಹಿಳೆಯಾಗಿದ್ದರೆ :**

ಎ) ಮಗ :

ಬಿ) ಅವಿವಾಹಿತ ಮಗಳು. ಮಗ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವನು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ;

ಸಿ) ವಿದುರ. ಮಗ ಅಥವಾ ಮಗಳು ಇಬ್ಬರೂ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ.

ಡಿ) ವಿಧವೆಯಾಗಿರುವ ಮಗಳು. ವಿದುರ. ಮಗ ಅಥವಾ ಅವಿವಾಹಿತ ಮಗಳು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ.

**(iia) ಮದುವೆಯಾಗದ ಮಹಿಳಾ ಗ್ರಾಮ ಪಂಚಾಯಿತಿಯ ನೌಕರಳು ಮೃತಳಾದರೆ :**

ಎ) ಅವಿವಾಹಿತ ಸಹೋದರ;

ಬಿ) ಅವಿವಾಹಿತ ಅಥವಾ ವಿದುರಳಾಗಿರುವ ಸಹೋದರಿ;

ಮೃತ ನೌಕರಳ ಮೇಲೆ ತಮ್ಮ ಬದುಕಿಗಾಗಿ ಅವಲಂಬಿತರಾಗಿರುವವರು.

**(iii)** ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಆ ವ್ಯಕ್ತಿಯ ವಿರುದ್ಧ ಮೃತ ಗ್ರಾಮ ಪಂಚಾಯಿತಿ ನೌಕರನ ಕೊಲೆ ಮಾಡಿರುವ ಅಥವಾ ಅಂತಹ ದುಷ್ಕೃತ್ಯವನ್ನು ನಡೆಸಲು ಕುಮ್ಮಕ್ಕು ನೀಡಿರುವ ಆಧಾರದ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆ ಹೂಡಿ ತನಿಖೆ ಅಥವಾ ವಿಚಾರಣೆ ನಡೆಯುತ್ತಿದ್ದರೆ ಅಂತಹ ವ್ಯಕ್ತಿಗಳು ಈ ನಿಯಮಗಳಡಿಯಲ್ಲಿ ನೇಮಕಾತಿ ಆಗಲಿ ಅರ್ಹರಿರುವುದಿಲ್ಲ.

3. **ವಯೋಮಿತಿ :** ಉಪಬಂಧ 4(6) ಕಲ್ಪಿಸಿರುವಂತೆ;
ಆದರೆ ವಿಧವೆ ಅಥವಾ ವಿಕಲಚೇತನ ವ್ಯಕ್ತಿಗಳಿಗೆ 10 ವರ್ಷಗಳ ಸಡಿಲಿಕೆಯನ್ನು ನೀಡಲಾಗಿದೆ.

